◆ **ಲೇಖಕರನ್ನು ಪ್ರೇರಿಸುವ ಜೀವನದರ್ಶನಗಳು ಇರುವಂತೆ ವಿಮರ್ಶಕರನ್ನು ರೂಪಿಸುವ ಜೀವನದರ್ಶನಗಳು ಕೂಡ ಇರುತ್ತವೆ. ಇವುಗಳ ಜೊತೆ ಜಗಳ, ಸಂವಾದ ಮತ್ತು ವಿಸ್ತರಣೆ ನಡೆಯುತ್ತಲೇ ಇರುವುದುಂಟು. ನಿಮ್ಮ ವಿಮರ್ಶೆಯ ಹಿಂದೆ ಇದ್ದ/ಇರುವ ಇಂಥ ಜೀವನದರ್ಶನಗಳು ಯಾವುವು?**

ಜೀವನ ನಡೆಸೋದು; ಅನುಭವ, ಭಾವನೆ ಮತ್ತು ವಿಚಾರಗಳನ್ನು ಒಳಗೊಳ್ಳೋದು, ಅವುಗಳ ಮೂಲಕ ನಮ್ಮ ಚಿತ್ತವೃತ್ತಿಗಳನ್ನು, ಭಾವಲೋಕವನ್ನು, ನಡವಳಿಕೆಯನ್ನು, ನುಡಿವಳಿಕೆಯನ್ನು ಬೆಳೆಸಿ ಕೊಳ್ಳೋದು ಕಥೆಗಾರ, ಕಾದಂಬರಿಕಾರ ಇವರ ವಿಷಯದಲ್ಲಿ ಎಷ್ಟು ಸತ್ಯವೋ ಉಳಿದವರ ವಿಷಯದಲ್ಲೂ ಕೂಡ ಅಷ್ಟೇ ಸತ್ಯ. ವಿಮರ್ಶೆ ಮಾತ್ರವಲ್ಲ, ಕಲೆಯ ಯಾವುದೇ ಪ್ರಕಾರದಲ್ಲಿ ತೊಡಗಿರುವವರ ವಿಷಯದಲ್ಲೂ ಇದು ನಿಜ. ಪ್ರತಿಯೊಬ್ಬರೂ ಸ್ವಂತ ಅನುಭವದಿಂದ, ಅನ್ಯರ ಅನುಭವದಿಂದ, ಅನ್ಯದ ಅನುಭವಗಳಿಂದ ಮತ್ತು ಚರಿತ್ರೆಯಿಂದ ಕಲಿಯುತ್ತಲೇ ಹೋಗುತ್ತಾರೆ. ಕಾಲದಿಂದ ಕಾಲಕ್ಕೆ ಹೊಸ ಹೊಸ ಅನುಭವಗಳಿಗೆ-ಅನಿಸಿಕೆಗಳಿಗೆ ತೆರೆದುಕೊಳ್ಳುತ್ತಾರೆ. ಆಲೋಚನೆಯ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುತ್ತಲೇ ಇರಬೇಕಾಗುತ್ತದೆ. ಸದ್ಯದ ಮತ್ತು ಶಾಶ್ವತ ಅನುಭವಗಳೆರಡೂ ಅವರನ್ನು ಪ್ರಭಾವಿಸುತ್ತವೆ. ಸದ್ಯವನ್ನು ತೀವ್ರವಾಗಿ ಒಳಗೊಳ್ಳುತ್ತಲೇ ಶಾಶ್ವತವನ್ನೂ ಧ್ಯಾನಿಸುತ್ತಾ ಹೋಗಬೇಕಾಗುತ್ತದೆ. ಇದು ವಿಮರ್ಶಕರಿಗೂ ಅಗತ್ಯವಾದ ಒಂದು ಸ್ಥಿತಿ. ನನ್ನ ದೃಷ್ಟಿಯಲ್ಲಿ ಕಲಾದರ್ಶನ ಎನ್ನುವುದು ಒಟ್ಟು ಜೀವನದರ್ಶನದ ಭಾಗವಾಗಿಯೇ ಇರುವಂಥದ್ದು. ಕಲೆಯು ಚಲನಶೀಲವಾದ ಸಂಗತಿ. ಅದು ಕಾಲದಿಂದ ಕಾಲಕ್ಕೆ ಹಿಗ್ಗುವ ಮತ್ತು 'ಹಿಗ್ಗಿಸುವ' ಬಗೆಯು, ಹಲವು ವಿಷಯಗಳನ್ನು ಅವಲಂಬಿಸಿರುತ್ತದೆ. ಕಲಾದರ್ಶನ, ಜೀವನದರ್ಶನ ಮತ್ತು ಸಮಾಜದರ್ಶನಗಳ ಪರಸ್ಪರ ಸಂಬಂಧಿಸಿದ ಆಗುಹೋಗುಗಳಲ್ಲಿ ರೂಪುಗೊಳ್ಳುವ ತಿಳಿವಳಿಕೆ ಇದೆಯಲ್ಲಾ, ಆ ತಿಳಿವಳಿಕೆಯು ವಿಮರ್ಶೆಯನ್ನು ಸೃಷ್ಟಿಸುತ್ತದೆ. ಇದು ಯಾವಾಗಲೂ ವೈವಿಧ್ಯವನ್ನು, ಹೊಸದನ್ನು ಒಳಗೊಳ್ಳಲು ಬಯಸುತ್ತದೆ. ಇದು ನಿಂತ ನೀರಾದಾಗ ಅಥವಾ ಕೆಲವು ಸಲ ಆಗುವ ಹಾಗೆ ತನಗೆ 'ಅನ್ಯ'ವಾದ ಯಾವುದೋ ಒಂದು ಸಿದ್ಧಾಂತವನ್ನು ವಿರೋಧಿಸುತ್ತಲೇ ಇದ್ದಾಗ ಅಥವಾ ತನಗೆ ಬೇಕಾದ ರಾಜಕೀಯ ಸಿದ್ಧಾಂತಕ್ಕೆ ಅಂಟಿಕೊಂಡಾಗ ಅದರ ಚಲನಶೀಲತೆಗೆ ಧಕ್ಕೆ ಬರುತ್ತದೆ. ಇಷ್ಟನ್ನು ಹೇಳುವಾಗ ಕೂಡ ಕೆಲವು ಎಲ್ಲಾ ಕಾಲಕ್ಕೂ ಸಲ್ಲುವ, ಬದಲಾಗದ, ಬದಲಾಗಬಾರದ ಸಂಗತಿಗಳೂ ಇರುತ್ತವೆ ಎಂಬುದನ್ನು ಮರೆಯಬಾರದು. ಇವೆಲ್ಲವೂ ನಮ್ಮ ವ್ಯಕ್ತಿತ್ವದ ದ್ರವ್ಯವನ್ನು ರೂಪಿಸುವ ಸಂಗತಿಗಳು.

ನಾನು ಒಂದು ಸಾಹಿತ್ಯ ಕೃತಿಯನ್ನು ವಿಮರ್ಶಕನಾಗಿ ನೋಡುತ್ತಲೇ ಮನುಷ್ಯನಾಗಿ ಕೂಡ ನೋಡುತ್ತಿರುತ್ತೇನೆ. ಮೊದಮೊದಲು ಒಂದು ಸೀಮಿತವಾದ ಸಾಹಿತ್ಯಕ ಪರಿಸರದ ಪ್ರಭಾವ ನನ್ನ ವಿಮರ್ಶೆಯನ್ನು ಮುನ್ನಡೆಸಿತ್ತು. ಓದುವ ಬಗೆಗಳು ಬದಲಾದಂತೆ, ವಿಸ್ತಾರವಾದಂತೆ ಅದೂ ವಿಸ್ತಾರವಾಗುತ್ತ ಹೋಯಿತು. ಜೀವನದರ್ಶನ ಎನ್ನುವುದು ಭಾವಲೋಕ, ಅನುಭವಲೋಕ ಮತ್ತು ವಿಚಾರಲೋಕದಿಂದ ಸದಾ ರೂಪುಗೊಳ್ಳುತ್ತಲೇ ಇರುತ್ತದೆ. ಎಚ್. ನರಸಿಂಹಯ್ಯ ಅವರ ವಿಚಾರಗಳಿರಬಹುದು, ವಿವೇಕಾನಂದರ ವಿಚಾರಗಳಿರಬಹುದು, ಮಾರ್ಕ್ಸ್‌ವಾದ ಇರಬಹುದು, ನಾನು ಒಡನಾಡಿದ ಗೆಳೆಯರ ಪ್ರಭಾವ ಇರಬಹುದು,

> ಹೇಳುವ ಕ್ರಮದಲ್ಲಿ ಆಕ್ರಮಣಶೀಲತೆ ಇರುವುದಕ್ಕೂ, ಪ್ರಾಮಾಣಿಕತೆ ಇರುವುದಕ್ಕೂ ಒಂದು ವ್ಯತ್ಯಾಸ ಇದೆ. ಇದು ಸರಿ, ಇದು ಮಾತ್ರ ಸರಿ, ಇದೇ ಸರಿ ಅನ್ನುವುದಕ್ಕೂ ಇದೂ ಸರಿ ಇರಬಹುದು, ಬೇರೆ ಸಾಧ್ಯತೆಗಳೂ ಇರಬಹುದು ಅನ್ನುವ ನಂಬಿಕೆಯನ್ನು ಹೊಂದಿರುವುದಕ್ಕೂ ವ್ಯತ್ಯಾಸವಿದೆ.